ನಿಮ್ಮೊಡನೆ

# ಪೊಲೀಸ್: ಮಹಿಳೆಯರೇಕೆ ಕಡಿಮೆ?

ಮಹಿಳಾ ಪೊಲೀಸ್ ಸಿಬ್ಬಂದಿ ನೇಮಕಾತಿಯಲ್ಲಿ ಕರ್ನಾಟಕವೂ ಸಾಕಷ್ಟು ಹಿಂದಿದೆ. ದೇಶದಲ್ಲಿ ಅತ್ಯಂತ ಹೆಚ್ಚು ಮಹಿಳಾ ಪೊಲೀಸ್ ಸಿಬ್ಬಂದಿ ಇರುವುದು ಮಹಾರಾಷ್ಟ್ರದಲ್ಲಿ. ಆದರೆ ಒಟ್ಟು ಪುರುಷ ಸಿಬ್ಬಂದಿಗೆ ಹೋಲಿಸಿದರೆ ಮಹಿಳೆಯರ ನೇಮಕಾತಿಯಲ್ಲಿ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ.

ಮಹಿಳೆಯರ ವಿರುದ್ಧ ಅಪರಾಧಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಪೊಲೀಸ್ ಠಾಣೆಗಳಲ್ಲೂ ಮಹಿಳೆಯರ ವಿರುದ್ಧ ಅಪರಾಧಗಳ ಕುರಿತು ನಿರ್ಲಕ್ಷ್ಯ ಧೋರಣೆಯೇ ಎದ್ದು ಕಾಣುತ್ತಿದೆ. ಪುರುಷ ಪೊಲೀಸರು ಮತ್ತು ಅಧಿಕಾರಿಗಳು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಹೆಚ್ಚು ಸಂವೇದನಾಶೀಲರಾಗಿ ವರ್ತಿಸಬೇಕೆಂದು ಉನ್ನತ ಅಧಿಕಾರಿಗಳಿಂದ ಕಳಕಳಿ ವ್ಯಕ್ತವಾಗುತ್ತಿದ್ದರೂ ಪರಿಸ್ಥಿತಿಯಲ್ಲಿ ಅಂತಹ ವ್ಯತ್ಯಾಸವೇನೂ ಆಗಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ಪೊಲೀಸ್ ಪಡೆಯಲ್ಲಿ ಹೆಚ್ಚು ಹೆಚ್ಚು ಮಹಿಳೆಯರನ್ನು ನೇಮಕ ಮಾಡಬೇಕೆಂದು ನಿರ್ಧಾರವಾಗಿ ಎಷ್ಟೋ ವರ್ಷಗಳು ಸರಿದಿವೆ. ಆದರೆ ಪೊಲೀಸ್ ನೇಮಕಾತಿಯಲ್ಲಿ ಮಹಿಳೆಯರ ಸಂಖ್ಯೆ ತುಲನಾತ್ಮಕವಾಗಿ ಹೆಚ್ಚುತ್ತಿಲ್ಲ.

ಪೊಲೀಸ್ ಸಂಶೋಧನಾ ಮತ್ತು ಅಭಿವೃದ್ಧಿ ಬ್ಯೂರೊ (ಬಿಪಿಆರ್‌ಡಿ) ಸಲ್ಲಿಸಿರುವ 2016ರ ಅಂಕಿ ಅಂಶಗಳನ್ನು ಗಮನಿಸಿದರೆ ಮಹಿಳಾ ಸಿಬ್ಬಂದಿ ನೇಮಕಾತಿಯ ಕುರಿತು ಮುಂದುವರಿದಿರುವ ಇಲಾಖೆಯ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ದೇಶದ ಒಟ್ಟು ಮಂಜೂರಾದ ಪೊಲೀಸ್ ಬಲ 22.80 ಲಕ್ಷ. ಇದರಲ್ಲಿ ಈಗ 17.31 ಲಕ್ಷ ಪೊಲೀಸ್ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಮಹಿಳೆಯರ ಸಂಖ್ಯೆ ಇರುವುದು ಕೇವಲ 1.22 ಲಕ್ಷ ಮಾತ್ರ! ಅಂದರೆ ಒಟ್ಟು ಪೊಲೀಸ್ ಬಲದ ಶೇಕಡಾ 7 ಅಷ್ಟೆ! ಪೊಲೀಸ್ ಸಿಬ್ಬಂದಿಯಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಪ್ರಾತಿನಿಧ್ಯ ನೀಡಬೇಕು ಎಂದು ಸರ್ಕಾರ ಘೋಷಿಸಿ ವರ್ಷಗಳೇ ಕಳೆದಿವೆ. ಕಳೆದ ಆರು ವರ್ಷಗಳಲ್ಲಿ (2011ರಿಂದೀಚೆಗೆ) ನೇಮಕವಾಗಿರುವ ಮಹಿಳಾ ಪೊಲೀಸರ ಸಂಖ್ಯೆ 38,433 ಮಾತ್ರ. ಈ ಮಂದಗತಿಯಲ್ಲಿ ಮಹಿಳಾ ಪೊಲೀಸರ ನೇಮಕಾತಿ ನಡೆಯುತ್ತಾ ಹೋದರೆ ಇನ್ನು 20 ವರ್ಷಗಳು ಹೋದರೂ ನಿಗದಿತ ಶೇಕಡಾ 33ರ ಮೀಸಲಾತಿಯನ್ನು ಸಾಧಿಸಲು ಸಾಧ್ಯವಿಲ್ಲ. 2015ರ ಬಿಪಿಆರ್‌ಡಿ ವರದಿಯಲ್ಲೂ ಈ ಬಗ್ಗೆ ತೀವ್ರ ಚಿಂತೆ ವ್ಯಕ್ತಪಡಿಸಲಾಗಿತ್ತು. ಆದರೆ ಆ ವರ್ಷದ ನೇಮಕಾತಿಯಲ್ಲಿಯೂ ಮಹಿಳೆಯರ ಬಲ ಶೇಕಡಾ 10.86ರಷ್ಟು ವೃದ್ಧಿ ಆಯಿತೇ ಹೊರತು, ಹೆಚ್ಚಿನ ಪ್ರಯೋಜನವಾಗಿಲ್ಲ.

ಪೊಲೀಸ್ ಠಾಣೆಗೆ ಮಹಿಳೆಯರು ದೂರು ನೀಡಲು ಬರುವುದೆಂದರೆ ಅದೊಂದು ಹಿಂಸೆಯ ಸಂಗತಿ ಎನ್ನುವುದು ಈಗಲೂ ಸತ್ಯ. ಹಳ್ಳಿಗಳಲ್ಲಂತೂ ಪರಿಸ್ಥಿತಿ ಇನ್ನಷ್ಟು ದಯನೀಯವಾಗಿದೆ. ಪುರುಷ ಸಿಬ್ಬಂದಿ ಮಹಿಳಾ ದೂರುದಾರರನ್ನು ಕಡೆಗಣ್ಣಿನಿಂದಲೇ ನೋಡುತ್ತಾರೆ. ಬಹಳಷ್ಟು ಪ್ರಕರಣಗಳಲ್ಲಿ ದೂರು ಸ್ವೀಕರಿಸದೇ ಬುದ್ಧಿ ಹೇಳಿ ಕಳುಹಿಸುವುದು ಸಾಮಾನ್ಯ. ಹಾಗೆಂದೇ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಲಾಯಿತು. ಆದರೆ ಅವುಗಳ ಸಂಖ್ಯೆಯೂ ಹೇಳಿಕೊಳ್ಳುವಂತಿಲ್ಲ. 2011ರವರೆಗೆ ದೆಹಲಿ ಸಹಿತ ದೇಶದ 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳಾ ಠಾಣೆಗಳೇ ಇರಲಿಲ್ಲ. ಆಗ ದೇಶದಲ್ಲಿ ಇದ್ದ ಒಟ್ಟು ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಕೇವಲ 442. ಆ ಬಳಿಕ ಎಲ್ಲ ರಾಜ್ಯಗಳಲ್ಲಿ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಯಿತಾದರೂ ಒಟ್ಟು ಸಂಖ್ಯೆ ಹೇಳಿಕೊಳ್ಳುವಂತಿಲ್ಲ. ಈಗಲೂ ಎಷ್ಟೋ ಜಿಲ್ಲೆಗಳಲ್ಲಿ ಮಹಿಳಾ ಪೊಲೀಸ್ ಠಾಣೆಗಳಿಲ್ಲ.

ಪ್ರತಿ ಪೊಲೀಸ್ ಠಾಣೆಯಲ್ಲೂ ಕನಿಷ್ಠ 10 ಮಹಿಳಾ ಕಾನ್‌ಸ್ಟೇಬಲ್‌ಗಳು ಮತ್ತು ಮೂವರು ಸಬ್ ಇನ್‌ಸ್ಪೆಕ್ಟರ್‌ಗಳು ಇರಲೇಬೇಕು ಎಂದು 2013ರ ಸರ್ಕಾರಿ ಆದೇಶ ಹೇಳುತ್ತದೆ. ಆದರೆ ಅದು ನಿಯಮಾವಳಿ ಪುಸ್ತಕದಲ್ಲಿ ಮಾತ್ರ ಇದೆ. ಪೊಲೀಸ್ ಪಡೆಯಲ್ಲಿ ಉನ್ನತ ಹುದ್ದೆಗಳಲ್ಲಿ ಮಹಿಳೆಯರ ನೇಮಕವಾಗುವುದೂ ಕಡಿಮೆಯೇ. ದೇಶದಲ್ಲಿ ಡೈರೆಕ್ಟರ್ ಜನರಲ್, ಸ್ಪೆಶಲ್ ಡೈರೆಕ್ಟರ್ ಜನರಲ್ ಮತ್ತು ಅಡಿಷನಲ್ ಡೈರೆಕ್ಟರ್ ಜನರಲ್‌ಗಳ ಒಟ್ಟು ಹುದ್ದೆಗಳು 484 ಇದ್ದರೆ ಅದರಲ್ಲಿ ಮಹಿಳೆಯರ ಸಂಖ್ಯೆ ಕೇವಲ 29. 539 ಐಜಿ ಹುದ್ದೆಗಳಲ್ಲಿ ಮಹಿಳೆಯರ ಸಂಖ್ಯೆ 38. ಡಿಐಜಿ ಹುದ್ದೆಗಳಲ್ಲಾದರೂ ಮಹಿಳೆಯರಿಗೆ ಸೂಕ್ತ ಅವಕಾಶ ಸಿಗುತ್ತಿದೆಯೆ ಅಂದರೆ ಅದೂ ಇಲ್ಲ. ಒಟ್ಟು 385 ಡಿಐಜಿ ಹುದ್ದೆಗಳಲ್ಲಿ ಮಹಿಳೆಯರ ಸಂಖ್ಯೆ 25. ಇಲಾಖೆಯಲ್ಲಿ ಉನ್ನತ ಹುದ್ದೆಗಳಲ್ಲಿ ಮಹಿಳೆಯರಿಗೆ ಶೇಕಡಾ 1ಕ್ಕಿಂತ ಕಡಿಮೆ ಪ್ರಾತಿನಿಧ್ಯ ಸಿಕ್ಕಿರುವುದು ನೋಡಿದರೆ, ಇಲಾಖೆಯ ಒಳಗೂ ಮಹಿಳಾ ಸಿಬ್ಬಂದಿಯ ವಿರುದ್ಧ ತಾರತಮ್ಯ ನಡೆಯುತ್ತಿದೆ ಎನ್ನುವುದಕ್ಕೆ ಸಾಕ್ಷಿ.

ಮಹಿಳಾ ಪೊಲೀಸ್ ಸಿಬ್ಬಂದಿ ನೇಮಕಾತಿಯಲ್ಲಿ ಕರ್ನಾಟಕವೂ ಸಾಕಷ್ಟು ಹಿಂದಿದೆ. ದೇಶದಲ್ಲಿ ಅತ್ಯಂತ ಹೆಚ್ಚು ಮಹಿಳಾ ಪೊಲೀಸ್ ಸಿಬ್ಬಂದಿ ಇರುವುದು ಮಹಾರಾಷ್ಟ್ರದಲ್ಲಿ. ಆದರೆ ಒಟ್ಟು ಪುರುಷ ಸಿಬ್ಬಂದಿಗೆ ಹೋಲಿಸಿದರೆ ಮಹಿಳೆಯರ ನೇಮಕಾತಿಯಲ್ಲಿ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ. ತಮಿಳ್ನಾಡಿನಲ್ಲಿ ಒಟ್ಟು ಪೊಲೀಸ್ ಬಲದ ಶೇಕಡಾ 12.99 ರಷ್ಟು ಮಹಿಳಾ ಸಿಬ್ಬಂದಿ ಇದ್ದು ಪ್ರಾತಿನಿಧ್ಯದಲ್ಲಿ ಮೊದಲನೆ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪ್ರಾತಿನಿಧ್ಯ ಶೇಕಡಾ 12.07 ಇದೆ. ಕರ್ನಾಟಕದಲ್ಲಿ ಒಟ್ಟು 70,934 ಪೊಲೀಸ್ ಬಲದಲ್ಲಿ ಮಹಿಳೆಯರ ಸಂಖ್ಯೆ 4354 ಮಾತ್ರ ಇದ್ದು, ಶೇಕಡಾ 6.14ರಷ್ಟು ಮಹಿಳಾ ಪ್ರಾತಿನಿಧ್ಯ ಇದೆ.

ಪೊಲೀಸ್ ಬಲದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಶೇಕಡಾ 33ಕ್ಕೆ ಏರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳುವುದರ ಜತೆಗೆ ಈಗ ಇರುವ ಮಹಿಳಾ ಸಿಬ್ಬಂದಿಯ ಕುರಿತು ಪುರುಷ ಸಿಬ್ಬಂದಿಗಳ ಪೂರ್ವಾಗ್ರಹಗಳನ್ನು ನಿವಾರಿಸಲೂ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ.

■ ಬಿ.ಎಂ.ಹನೀಫ್



ಈಶ್ವರ